(ಕಂದಾಯ ಇಲಾಖೆ)

ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾ ಮಟ್ಟದ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಗುತ್ತಿಗೆ ಆಧಾರಿತ ತಾತ್ಕಾಲಿಕ ಆಯ್ಕೆ ಸಮಿತಿ

ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

OFFICE OF THE DEPUTY COMMISSIONER, MYSURU DISTRICT, MYSURU

ದೂರವಾಣಿ ಸಂ:0821-2424079, 2422110, 2428383

ಫಾಕ್ಸ್ ಸಂ:2429012 & 2428383 E-Mail: dcofficemysuru@gmail.com

ಸಂ: MYSDC-MAG4/CLW/03/2020 (E-88178) ದಿ:16-01-2020

## ಪತ್ರಿಕಾ ಪ್ರಕಟಣೆ

ವಿಷಯ:- ಮೈಸೂರು ಜಿಲ್ಲೆಯ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇರ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ತಾತ್ಕಾಲಿಕವಾಗಿ ಭರ್ತಿಮಾಡುವ ಕುರಿತು.

*********

ವಿಷಯಕ್ಕೆ ಸಂಬಂಧಿಸಿದಂತೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಮೈಸೂರು ಜಿಲ್ಲೆಯಲ್ಲಿನ ಖಾಲಿ ಇರುವ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇರ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ತಾತ್ಕಾಲಿಕವಾಗಿ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗೆ ನೇಮಕಾತಿ ಬಯಸುವ ಆಸಕ್ತ ಅಭ್ಯರ್ಥಿಗಳು ಅರ್ಜಿಯನ್ನು ದಿ:21-01-2020 ರೊಳಗಾಗಿ ಕಛೇರಿ ವೇಳೆಯಲ್ಲಿ (ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-30 ಗಂಟೆಯೊಳಗೆ) "ಸರ್ಕಾರಿ ಅಭಿಯೋಜಕರು ಹಾಗೂ ಸದಸ್ಯ ಕಾರ್ಯದರ್ಶಿ, ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಗುತ್ತಿಗೆ ಆಧಾರಿತ ತಾತ್ಕಾಲಿಕ ಆಯ್ಕೆ ಸಮಿತಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆವರಣ, ಮೈಸೂರು ಜಿಲ್ಲೆ, ಮೈಸೂರು" ಇವರಿಗೆ ಸಲ್ಲಿಸುವುದು. ಅವಧಿ ಮೀರಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿಲ್ಲಾಧಿಕಾರಿಗಳ ಪರವಾಗಿ,
ಮೈಸೂರು ಜಿಲ್ಲೆ, ಮೈಸೂರು

ದೂರವಾಣಿ ಸಂಖ್ಯೆ: 0821: 2540695
ಇ-ಮೇಲ್ : ppmys12@gmail.com

ಕರ್ನಾಟಕ ಸರ್ಕಾರ

**ಮೈಸೂರು ಜಿಲ್ಲಾ ಸಸಅ-ಸಸವ ಆಯ್ಕೆ ಸಮಿತಿ, ಮೈಸೂರು.**
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ,
ಸರ್ಕಾರಿ ಅಭಿಯೋಜಕರ ಕಛೇರಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಪಂಪಾಪತಿ ರಸ್ತೆ, ಸರಸ್ವತಿ ಪುರಂ,
ಮೈಸೂರು-570009

ಸಂಖ್ಯೆ: ಸಅ:ಮೈ: ನೇಮಕಾತಿ:ಸಿಶಾ:61:2019-20, ದಿನಾಂಕ: 16.01.2020.

-: ಅಧಿಸೂಚನೆ :-

ಮೈಸೂರು ಜಿಲ್ಲೆಯಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಖಾಲಿ ಇರುವ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕ ಸರ್ಕಾರಿ ವಕೀಲರ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇರ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ತಾತ್ಕಾಲಿಕವಾಗಿ ಭರ್ತಿ ಮಾಡಲು ಸಾಮಾನ್ಯ/ ಪ.ಜಾತಿ/ ಪ.ಪಂ; ಮಹಿಳೆ ಇತರೆ ಪ್ರವರ್ಗಗಳ ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಈ ಅಧಿಸೂಚನೆ ಅನುಸಾರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) ಒಟ್ಟು ಹುದ್ದೆಗಳ ಸಂಖ್ಯೆ : 8 ( ಎಂಟು)
ಸಾಮಾನ್ಯ ಅಭ್ಯರ್ಥಿ : 04, ಪ.ಜಾ-01, ಪ.ಪಂ-01, ಪ್ರವರ್ಗ-01 2ಎ-01,

2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 21.01.2020.

3) ವಿದ್ಯಾರ್ಹತೆ : ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ವಕೀಲರ ಕಾಯ್ದೆ 1961ರಂತೆ ಭಾರತ ದೇಶದ ಸಿವಿಲ್/ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಕನಿಷ್ಠ 3 ವರ್ಷ ವಕೀಲಿ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿರಬೇಕು.

4) ವಯೋಮಿತಿ

ಸಾಮಾನ್ಯ ಅಭ್ಯರ್ಥಿಗಳಿಗೆ : 37 ವರ್ಷಗಳು
ಪ್ರವರ್ಗ-2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ : 40 ವರ್ಷಗಳು
ಪ.ಜಾ/ ಪ. ಪಂಗಡ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳಿಗೆ : 42 ವರ್ಷಗಳು

5) ಅರ್ಜಿ ಸಲ್ಲಿಸುವ ವಿಧಾನ ಮತ್ತು ವಿಳಾಸ : ಈ ಅಧಿಸೂಚನೆಯೊಂದಿಗೆ ಇರುವ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಿತ ದಾಖಲಾತಿಗಳೊಂದಿಗೆ ದ್ವಿಪ್ರತಿಯಲ್ಲಿ ದಿನಾಂಕ: 21.01.2020ರ ಸಾಯಂಕಾಲ 5-30ಗಂಟೆ ಯೊಳಗೆ ಪ್ರಧಾನ ಸರ್ಕಾರಿ ಅಭಿಯೋಜಕರ ಕಛೇರಿ, ಪಂಪಾಪತಿ ರಸ್ತೆ, ಸರಸ್ವತಿ ಪುರಂ, ಮೈಸೂರು-570009. ಇಲ್ಲಿಗೆ ಸಲ್ಲಿಸುವುದು

. . . .2)

6) ಸಂಭಾವನೆ : ಮಾಸಿಕ ರೂ. 30,000=00 ಮೊತ್ತವನ್ನು ಸಂಚಿತ ಸಂಭಾವನೆ ಹಾಗೂ ರೂ. 5,000=00ಗಳನ್ನು ಕಾರ್ಯನಿರ್ವಹಿಸುವ ಸೇವೆಗೆ ಪೂರಕವಾಗಿ ಅಗತ್ಯವಿರುವ ಸಿಬ್ಬಂದಿ ವೆಚ್ಚವೆಂದು ಒಟ್ಟು ಮೊತ್ತ ರೂ. 35,000=00 ( ರೂ. ಮೂವತ್ತೈದು ಸಾವಿರ ಮಾತ್ರ) ಗಳನ್ನು ಪಡೆಯಲು ಅರ್ಹರಿರುತ್ತಾರೆ.

ಈ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟಿರುತ್ತದೆ.

- ಅಭ್ಯರ್ಥಿಗಳು ತಾವು ವಕೀಲ ವೃತ್ತಿ ನಡೆಸುತ್ತಿರುವ ಬಗ್ಗೆ ಆಯಾ ನ್ಯಾಯಾಲಯದ ಪೀಠಾದಿಕಾರಿಗಳಿಂದ ಪಡೆದ ಸರ್ಟಿಫಿಕೇಟ್ / ಪ್ರಮಾಣ ಪತ್ರಗಳನ್ನು ತಮ್ಮ ಅರ್ಜಿಯೊಡನೆ ಸಲ್ಲಿಸುವುದು ಕಡ್ಡಾಯವಾಗಿದೆ.
- ಆಯ್ಕೆಗೊಂಡ ಅಭ್ಯರ್ಥಿಗಳು ತಾವು ಪ್ರಸ್ತುತ ವಕೀಲ ವೃತ್ತಿಯನ್ನು ನಡೆಸುತ್ತಿರುವ ಸ್ಥಳವನ್ನು ಹೊರತುಪಡಿಸಿ ತಮ್ಮ ಜಿಲ್ಲೆಯಲ್ಲಿನ: ಬೇರೆ ನ್ಯಾಯಾಲಯಗಳಲ್ಲಿ ಅಥವಾ ನೆರೆಯ ಜಿಲ್ಲೆಯ ನ್ಯಾಯಾಲಯಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
- ಗುತ್ತಿಗೆ ಆಧಾರದ ಮೇಲೆ ಆಯ್ಕೆಗೊಂಡ ಅಭರ್ಥಿಗಳು ಕಾಲಕಾಲಕ್ಕೆ ಸರ್ಕಾರ/ ಅಭಿಯೋಗ ನಿರ್ದೇಶಕರು ನೀಡುವ ನಿರ್ದೇಶನ / ಸೂಚನೆಗಳನ್ನು ಪಾಲಿಸತಕ್ಕದ್ದು.
- ಆಯ್ಕೆಗೊಂಡ ಅಭ್ಯರ್ಥಿಯು ಆದೇಶದಲ್ಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಾರೆ ಎಂಬುದಾಗಿ ಸರ್ಕಾರಕ್ಕೆ ಕಂಡುಬಂದಲ್ಲಿ ಅಂತಹ ಅಭ್ಯರ್ಥಿಯನ್ನು ಯಾವುದೇ ಪೂರ್ವ ಸೂಚನೆಯಿಲ್ಲದೆ ಹುದ್ದೆಯಿಂದ ತೆಗೆದುಹಾಕುವ ಅಧಿಕಾರ ಸರ್ಕಾರಕ್ಕೆ ನಿಹಿತವಾಗಿದೆ.
- ಈ ಗುತ್ತಿಗೆ ಆಧಾರದ ಮೇಲಿನ ಸೇವೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಸದರಿ ಸೇವೆಯನ್ನು ಯಾವುದೇ ಸಂದರ್ಭಗಳಲ್ಲೂ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.
- ಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ಅಭ್ಯರ್ಥಿಯ ಸೇವೆಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಅವರು ಸೇವೆ ಸಲ್ಲಿಸುವ ಹುದ್ದೆಯನ್ನು ಅರ್ಹ ಅಭ್ಯರ್ಥಿಯಿಂದ ನಿಯಮಾನುಸಾರ ಖಾಯಂ ಆಗಿ ತುಂಬುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡದಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ.
- ಅಭ್ಯರ್ಥಿಯು ಮೀಸಲಾತಿ ಕೋರಿದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ದ್ವಿಪ್ರತಿಗಳಲ್ಲಿ ಸಲ್ಲಿಸುವುದು.

16/1/20

( ಟಿ.ಬಿ. ಲಕ್ಷ್ಮಿ ದೇವಿ)
ಪ್ರಧಾನ ಸರ್ಕಾರಿ ಅಭಿಯೋಜಕರು ಮತ್ತು
ಕಾರ್ಯದರ್ಶಿ, ಆಯ್ಕೆ ಸಮಿತಿ, ಮೈಸೂರು.

ದೂರವಾಣಿ ಸಂಖ್ಯೆ: 0821: 2540695
ಇ-ಮೇಲ್ : ppmys12@gmail.com

ಕರ್ನಾಟಕ ಸರ್ಕಾರ

ಮೈಸೂರು ಜಿಲ್ಲಾ ಸಸಅ-ಸಸವ ಆಯ್ಕೆ ಸಮಿತಿ, ಮೈಸೂರು.
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ,
ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಪಂಪಾಪತಿ ರಸ್ತೆ, ಸರಸ್ವತಿ ಪುರಂ, ಮೈಸೂರು.

**Application formfor the post of Assistant Public Prosecutor-cum Assistant**

**Government Pleader on contract basis**

*ಗುತ್ತಿಗೆ ಆಧಾರದ ಮೇಲೆ ಸಹಾಯಕ ಸರ್ಕಾರಿ ಅಭಿಯೋಜಕರು-ವ-ಸಹಾಯಕರ ಸರ್ಕಾರಿ ವಕೀಲರ ಹುದ್ದೆಗೆ ಅರ್ಜಿ*

**PASS PPORT SIZE PHOTOGRAPH**

| | | |
|---|---|---|
| 1. | ಅಭ್ಯರ್ಥಿ ಪೂರ್ಣ ಹೆಸರು (ಎಸ್.ಎಸ್.ಎಲ್.ಸಿ/10ನೇ.ಸಮಾನ ಅಂಕಪಟ್ಟಿಯಲ್ಲಿರುವಂತೆ) | |
| 2. | ತಂದೆಯ ಹೆಸರು (ಎಸ್.ಎಸ್.ಎಲ್.ಸಿ/ 10ನೇ /ಸಮಾನ ಅಂಕಪಟ್ಟಿಯಲ್ಲಿರುವಂತೆ) | |
| 3. | ಲಿಂಗ | |
| 4. | ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ/ 10ನೇ /ಸಮಾನ ಅಂಕಪಟ್ಟಿಯಲ್ಲಿರುವಂತೆ) | |
| 5. | ಸದ್ಯದ ವಿಳಾಸ:/ ಖಾಯಂ ವಿಳಾಸ. | |
| 6. | ತಂದೆ/ ಗಂಡನ ಹೆಸರು | |
| 7. | ಮಾತೃಭಾಷೆ | |
| 8. | ವೈವಾಹಿಕ ಮಾಹಿತಿ | |
| 9. | ರಾಷ್ಟ್ರೀಯತೆ | |
| 10. | ಮೋಬೈಲ್ ಸಂಖ್ಯೆ: | |
| 11. | ಇ-ಮೇಲ್ ವಿಳಾಸ | |
| 12. | ವಿದ್ಯಾರ್ಹತೆ | |
| 13. | ಕಾನೂನು ಪದವಿ ಬಗ್ಗೆ ಮಾಹಿತಿ | |
| | ಎಲ್.ಎಲ್.ಬಿ ಪದವಿಯಲ್ಲಿ ವರ್ಷಾವಾರು /ಸೆಮಿಸ್ಟಾರ್‌ವಾರು ಪಡೆದ ಅಂಕಗಳು | |
| | ಎಲ್ಲಾ ವರ್ಷಾಗಳ/ ಸೆಮಿಸ್ಟರ್ ವಾರು ಪಡೆದ ಒಟ್ಟು ಅಂಕ | |
| | ಎಲ್ಲಾ ವರ್ಷಾಗಳ / ಸೆಮಿಸ್ಟರ್‌ವಾರು ಗರಿಷ್ಠ ಒಟ್ಟು ಅಂಕ | |
| | ಎಲ್ಲ ವರ್ಷಗಳ ಸೆಮಿಸ್ಟರ್ ಒಟ್ಟು ಶೇಕಡಾವಾರು. (ಪ್ರತ್ಯೇಕವಾಗಿ) | |

| | | |
|---|---|---|
| 14. | ಅಭ್ಯರ್ಥಿಯ ಯಾವುದಾದರೂ ಕ್ರಿಮಿನಲ್ ಪ್ರಕರಣ ದಾಖಲಾಗಿದೆಯೇ? ಇದ್ದಲ್ಲಿ ಆ ಬಗ್ಗೆ ಮಾಹಿತಿ ನೀಡುವುದು. | |
| 15. | ಅರ್ಜಿದಾರರು ಗಣಕ ಯಂತ್ರದ ಪರಿಣಿತಿ / ಜ್ಞಾನವುಳ್ಳವರೇ? ಹೌದಾದಲ್ಲಿ ಈ ಬಗ್ಗೆ ಸಂಕ್ಷಿಪ್ತ ಮಾಹಿತಿ: | |
| 16. | ಅರ್ಜಿದಾರರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ್ದೀರಾ? ಹೌದಾದಲ್ಲಿ ಮಾಹಿತಿ. | |
| 17. | ಮೀಸಲಾತಿ ಪ್ರವರ್ಗ 1–2–3– ಸೇರಿದವರಾಗಿದ್ದಲ್ಲಿ ಯಾವ ಪ್ರವರ್ಗಕ್ಕೆ ಸೇರಿದವರು ಎಂಬ ಬಗ್ಗೆ ಮಾಹಿತಿ. | |
| 18. | ಯಾವುದೇ ಸರ್ಕಾರಿ/ ಅರೆ ಸರ್ಕಾರಿ ಸೇವೆಯಿಂದ ವಜಾಗೊಂಡಿರುವವರೇ? ಹೌದಾದಲ್ಲಿ ಈ ಬಗ್ಗೆ ಸಂಕ್ಷಿಪ್ತ ಮಾಹಿತಿ. | |
| 19. | ಮಾಜಿ ಸೈನಿಕರೇ? | |
| 20. | ಗುತ್ತಿಗೆ ಆಧಾರದಲ್ಲಿ ಆಯ್ಕೆಯಾದಲ್ಲಿಜಿಲ್ಲೆಯ ಇತರೆ ತಾಲ್ಲೂಕು ಅಥವಾ ಪಕ್ಕದ ಜಿಲ್ಲೆಯಲ್ಲಿ ಸೇವೆ ಸಲ್ಲಿಸಲು ಸಿದ್ದರಿರುವಿರೋ? | |
| 21. | ವಕೀಲ ವೃತ್ತಿ ನಡೆಸುತ್ತಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರುವವರೇ? | |

**: Enrollment Details :**

| | | |
|---|---|---|
| 1. | ಸನ್ನದು ನೊಂದಣಿ ಸಂಖ್ಯೆ ಮತ್ತು ದಿನಾಂಕ: | |
| 2. | ವಕೀಲಿ ವೃತ್ತಿ ಪ್ರಾರಂಭಿಸಿದ ದಿನಾಂಕ ಮತ್ತು ದಿನಾಂಕ: 21.01.2020ಕ್ಕೆ ವಕೀಲರ ವೃತ್ತಿ ನಡಿಸಿದ ಒಟ್ಟು ಅವಧಿ. | |
| 3. | ವಕೀಲಿ ವೃತ್ತಿ ಮಾಡುತ್ತಿರುವ ತಾಲ್ಲೂಕು ಮತ್ತು ಜಿಲ್ಲೆ | |
| 4. | ವಕೀಲಿ ವೃತ್ತಿ | |
| 5. | ವಕೀಲ ವೃತ್ತಿ ನಡೆಸಿದ ಅನುಭವದ ಕುರಿತು ಸಂಕ್ಷಿಪ್ತ ವಿವರಗಳು: | |
| 6. | ಅಭ್ಯರ್ಥಿಯು ರಾಜ್ಯ/ ಕೇಂದ್ರ ಸರ್ಕಾರದ ಸ್ವಾಯತ್ತ ಸಂಸ್ಥೆಗೆ ಒಳಪಟ್ಟು ನೌಕರರೇ? | |

ಅಭ್ಯರ್ಥಿಯ ಘೋಷಣೆ: ನಾನು ಗುತ್ತಿಗೆ ಆಧಾರದ ನೇಮಕಾತಿಗೆ ಸಂಬಂಧಪಟ್ಟ ಮಾಹಿತಿಗಳನ್ನು ತಿಳಿದಿರುತ್ತೇನೆ ಮತ್ತು ಈ ಅರ್ಜಿಯಲ್ಲಿ ನಾನು ಒದಗಿಸಿರುವ ಮಾಹಿತಿಯು ನನ್ನ ತಿಳುವಳಿಕೆಗೆ ಅನುಸಾರ ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಎಂದು ಪ್ರಮಾಣೀಕರಿಸಿ ಘೋಷಿಸಿರುತ್ತೇನೆ. ಈ ಅರ್ಜಿಯಲ್ಲಿ ಒದಗಿಸಿರುವ ವಿವರಗಳು ಸುಳ್ಳು ಅಥವಾ ತಪ್ಪೆಂದು ಕಂಡು ಬಂದಲ್ಲಿ ಗುತ್ತಿಗೆ ಆಧಾರದ ನೇಮಕಾತಿಗೆ ನಾನು ಅನರ್ಹಗೊಳ್ಳುವುದರ ಜೊತೆಗೆ ನಾನು ಸೂಕ್ತ ಕಾನೂನು ಕ್ರಮಕ್ಕೆ ಒಳಪಡುವೆನೆಂದು ಒಪ್ಪಿರುತ್ತೇನೆ.

ಅರ್ಜಿದಾರರ ಸಹಿ

ದಿನಾಂಕ:

ಸ್ಥಳ:

| ಕ್ರಮ ಸಂ: | ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಬೇಕು | ಲಗತ್ತುಗಳು | ಪುಟಗಳ ಸಂಖ್ಯೆ: |
|---|---|---|---|
| 1. | ಜನ್ಮದಿನಾಂಕವಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ. | ಲಗತ್ತಿಸಿದೆ/ ಲಗತ್ತಿಸಿಲ್ಲ | |
| 2. | ಪ್ರತಿ ವರ್ಷದ ಕಾನೂನು ಪದವಿಯ ಸೆಮಿಸ್ಟಾರ್‌ವಾರು ಅಂಕಪಟ್ಟಿಗಳ ಪ್ರತಿಗಳು | ಲಗತ್ತಿಸಿದೆ/ ಲಗತ್ತಿಸಿಲ್ಲ | |
| 3. | ವಕೀಲರ ಪರಿಷತ್ತಿನಿಂದ ಪಡೆದ ಸನ್ನದು ( ಎನ್ ರೋಲ್ ಮೆಂಟ್ ಸರ್ಟಿಫಿಕೇಟ್) | ಲಗತ್ತಿಸಿದೆ/ ಲಗತ್ತಿಸಿಲ್ಲ | |
| 4. | ವಕೀಲರಾಗಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ವಕೀಲರ ಸಂಘದಿಂದ ಪಡೆದ ಪ್ರಮಾಣ ಪತ್ರ | ಲಗತ್ತಿಸಿದೆ/ ಲಗತ್ತಿಸಿಲ್ಲ | |
| 5. | ವಕೀಲರ ವೃತ್ತಿ ನಡೆಸುತ್ತಿರುವ ಬಗ್ಗೆ ಸಂಬಂಧಪಟ್ಟ ನ್ಯಾಯಾಲಯಗಳ ಮಾನ್ಯ ಪೀಠಾಧಿಕಾರಿಯವರಿಂದ ಪಡೆದಿರುವ ಪ್ರಮಾಣ ಪತ್ರ | ಲಗತ್ತಿಸಿದೆ/ ಲಗತ್ತಿಸಿಲ್ಲ | |
| 6. | ಆಯ್ಕೆಗೊಂಡ ಅಭ್ಯರ್ಥಿಗಳು ತಾವು ಪ್ರಸ್ತುತ ವಕೀಲ ವೃತ್ತಿಯನ್ನು ನಡೆಸುತ್ತಿರುವ ಸ್ಥಳವನ್ನು ಹೊರತು ಪಡಿಸಿ, ತಮ್ಮ ಜಿಲ್ಲೆಯಲ್ಲಿನ ಬೇರೆ ನ್ಯಾಯಾಲಯಗಳಲ್ಲಿ ಅಥವಾ ನೆರೆಯ ಜಿಲ್ಲೆಯ ನ್ಯಾಯಾಲಯಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ಒಪ್ಪಿಗೆ ಪತ್ರ | ಲಗತ್ತಿಸಿದೆ/ ಲಗತ್ತಿಸಿಲ್ಲ | |
| 7. | ಜಾತಿ ಮತ್ತು ಆದಾಯದ ಅನ್ವಯ ಮೀಸಲಾತಿ ಸೌಲಭ್ಯವನ್ನು ಪಡೆಯಲಿಚ್ಚಿಸಿರುವರು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ | ಲಗತ್ತಿಸಿದೆ/ ಲಗತ್ತಿಸಿಲ್ಲ | |

ದಿನಾಂಕ:

ಸ್ಥಳ:

ಅರ್ಜಿದಾರರ ಸಹಿ